# ಕೊರೊನಾ ಕಾಲದ ಕಟಾವು

**ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ**
**ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು**
**ಮದುವೆಗೋ ಮಸಣಕೋ ಹೋಗೆಂದ ಕಡೆಗೋಡು**
**ಪದ ಕುಸಿಯೆ ನೆಲವಿಹುದು– ಮಂಕುತಿಮ್ಮ**

‘ಮಂಕುತಿಮ್ಮನ ಕಗ್ಗ’ದ ಜನಪ್ರಿಯ ಸಾಲುಗಳಿವು. ಒಂದು ಹಂತದವರೆಗೆ ಕೆಲವು ಕವಿತೆಗಳು ಕವಿಯ ವಶದಲ್ಲಿರುತ್ತವೆ. ಜನಮುಖಿಯಾದಷ್ಟೂ ಕವಿಯ ವಶದಿಂದ ಜಾರಿ ಜನರ ಕೈ ಸೇರುತ್ತವೆ.

ಡಿವಿಜಿಯವರ ‘ಮಂಕುತಿಮ್ಮನ ಕಗ್ಗ’ ಜನಪ್ರಿಯವಾದದ್ದು ಮತ್ತು ಜನಪರವಾದದ್ದು. ಈ ಕಾರಣದಿಂದಲೇ. ಈ ಕಗ್ಗವನ್ನು ಅವರ ಶ್ರೇಷ್ಠ ಕೃತಿಯೆಂದೇ ಕರೆಯಲಾಗುತ್ತದೆ. ಅವರ ‘ಜ್ಞಾಪಕ ಚಿತ್ರಶಾಲೆ’ಗಿಂತಲೂ ಪಂಡಿತರಿಂದ, ಪಾಮರರಿಂದ ಹೆಚ್ಚು ಮೆಚ್ಚುಗೆಗೆ ಈ ಕೃತಿ ಒಳಗಾಗಿದೆ. ಬದುಕಿನ ಸರಳ ಸತ್ಯಗಳನ್ನು ಅಷ್ಟೇ ಸರಳವಾಗಿ ಎಲ್ಲರೂ ಕಂಡುಕೊಳ್ಳಬಹುದಾದಾದ ಸತ್ಯ ಎನ್ನುವಂತೆ ನಿರೂಪಿಸುವುದು ಸವಾಲಿನ ಸಂಗತಿ.

ಅತಿಶಯವಾದ ಅಲಂಕಾರಿಕ ಉಕ್ತಿಗಳಿಂದ ಓದುಗರ ಉಸಿರುಕಟ್ಟಿಸುವಂತೆ ಬರೆಯುವುದು ಒಂದು ಕ್ರಮ. ಸಾಮಾನ್ಯರನ್ನು ಒಳಗೊಳ್ಳುವಂತೆ ಉನ್ನತ ವಿಚಾರಗಳನ್ನು ಸರಳವಾಗಿ ಬರೆಯುವುದು ಇನ್ನೊಂದು ಕ್ರಮ. ಸರ್ವಜ್ಞನ ವಚನಗಳು, ಸೋಮೇಶ್ವರನ ಶತಕಗಳು, ದಿನಕರ ದೇಸಾಯಿಯವರ ಚೌಪದಿಗಳು ಹಾಗೂ ಮಂಕುತಿಮ್ಮನ ಕಗ್ಗ ಕಿರಿದರಲ್ಲಿ ಹಿರಿದರ್ಥವನ್ನು ಕೊಡುವ ರಚನೆಗಳಾಗಿವೆ.

ಉಲ್ಲೇಖಿಸಿದ ಪದ್ಯದ ರಚನಾ ಕ್ರಮ ವಿಶೇಷವಾದದ್ದು. ಕವಿ ಬಳಸುವ ಬಂಡಿಯ ಚಿತ್ರ ಪಡೆದುಕೊಳ್ಳುವ ವಿವಿಧ ಅರ್ಥ ವಿನ್ಯಾಸಗಳು ಬದುಕಿನ ಅರ್ಥವನ್ನು ತೆರೆದಿಡುತ್ತವೆ. ಬಂಡಿ, ಬಂಡಿಗೊಬ್ಬ ಒಡೆಯ, ಒಡೆಯ ನಡೆಸಿದಂತೆ ನಡೆವ ಕುದುರೆ, ಅವನು ಕರೆದೊಯ್ದು ಕಡೆಗೆ ಚಲಿಸುವ ಪ್ರಯಾಣಿಕರು ಇವೆಲ್ಲವೂ ರೂಪಕವೆ. ಬದುಕು ಎಂಬುದು ಸದಾ ಚಲನೆಯಲ್ಲಿರುವ ಬಂಡಿ. ದೈವವೊಂದಿದೆ, ಅದು ನಮ್ಮನ್ನು ನಡೆಸುತ್ತದೆ, ನಮಗೆ ಆಯ್ಕೆಯ ಸ್ವಾತಂತ್ರ್ಯಗಳಿಲ್ಲ, ಅದು ಕೊಂಡೊಯ್ದ ಕಡೆಗೆ ನಾವು ಚಲಿಸುತ್ತಲೇ ಇರುತ್ತೇವೆ ಎಂಬ ಮಾತುಗಳು ಆಸ್ತಿಕತೆಯ ಕಡೆಗೇ ಬೆರಳು ತೋರುತ್ತವೆ.

ಜಗತ್ತಿನಲ್ಲಿ ನಡೆದ ಎರಡು ಮಹಾಯುದ್ಧಗಳು ದೇವರ ಅಸ್ತಿತ್ವದ ಬಗ್ಗೆ ನಂಬಿಕೆ ಕಳೆದುಕೊಳ್ಳುವಂತೆ ಮಾಡಿದವು. ಈ ಕಾರಣದಿಂದಾಗಿಯೇ ಅಸಂಗತವಾದ ತಲೆಯೆತ್ತಿತ್ತು. ದೇವರು ಇದ್ದಿದ್ದರೆ ಯುದ್ಧ, ಮಾರಣಹೋಮಗಳು ಯಾಕೆ ನಡೆಯುತ್ತಿದ್ದವು ಎಂಬ ಪ್ರಶ್ನೆಗಳು ತಲೆಯೆತ್ತುತ್ತವೆ. ಪಾಶ್ಚಾತ್ಯ ಚಿಂತನೆಗಳಲ್ಲಿ ‘ದೇವರು ಸತ್ತಿದ್ದಾನೆ, ಹೊಸದೊಂದು ದೇವರಿಗಾಗಿ ಕಾಯುತ್ತಿದ್ದೇವೆ’ ಎಂಬ ಕಾಣಿಸಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಮೇಲಿನ ಪದ್ಯ ನಮ್ಮ ಗೊತ್ತುಗುರಿಗಳಿಂದಾಚೆಗೆ ಅದಮ್ಯವಾದ ಶಕ್ತಿಯೊಂದು ನಮ್ಮನ್ನು ನಡೆಸುತ್ತದೆ ಎಂಬ ನಂಬಿಕೆ ಹುಟ್ಟಿಸುತ್ತದೆ. ಗಾಡಿಯಲ್ಲಿ ಕೂರುವುದಷ್ಟೇ ನಿನ್ನ ಕೆಲಸ. ಆ ಗಾಡಿ ಕರೆದೊಯ್ದ ಕಡೆಗೆ ಸಾಗಬೇಕು. ಭಾರತೀಯರ ಚಿಂತನೆಗಳು ದೈವ ಇರುವ, ಇಲ್ಲದಿರುವ ಎರಡೂ ಆಸ್ತಿಕ ಮತ್ತು ನಾಸ್ತಿಕ ನಂಬಿಕೆಗಳ ಸುತ್ತ ನಡೆದಿವೆ, ನಡೆಯುತ್ತಲಿವೆ. ಆಸ್ತಿಕವಾದಕ್ಕೆ ಇರುವಷ್ಟೇ ಭದ್ರ ಬುನಾದಿ ದೇವರ ಅಸ್ತಿತ್ವವನ್ನು ಪ್ರಶ್ನಿಸುವ ಚಾರ್ವಾಕವಾದಕ್ಕೂ ಇದೆ.

ಸದ್ಯದ ಪರಿಸ್ಥಿತಿಯಲ್ಲಿ ವಿಧಿ ಅಥವಾ ದೈವದ ಬಗೆಗಿನ ಚಿಂತನೆಗಳು, ನಂಬಿಕೆಗಳು ತಲೆಕೆಳಗಾಗಿವೆ. ಈಗ ಮಾನವನ ಜೀವದ ದಾಳವಿರುವುದು ಕೊರೊನಾ ಎಂಬ ಕಣ್ಣಿಗೆ ಕಾಣದ ಕ್ರಿಮಿಯ ಕೈಯಲ್ಲಿದೆ. ಉಸಿರಾಟವೆಂದರೆ ಆಮ್ಲಜನಕವನ್ನು ಒಳಗೆ ತೆಗೆದುಕೊಂಡು ಬೇಡದ ಇಂಗಾಲವನ್ನು ಹೊರಬಿಡುವುದು. ಈಗ ಸುತ್ತಲೂ ಇರುವ ಆಮ್ಲಜನಕ ನಮ್ಮ ಜೀವ ಉಳಿಸುತ್ತಿಲ್ಲ. ಕೊಂಡು ಉಸಿರಾಡಿದ ಆಮ್ಲಜನಕದೊಂದಿಗೆ ಶಿಲೀಂಧ್ರ ದಾಳಿಯ ಅಪಾಯದ ಸಾಧ್ಯತೆಯೂ ಇದೆ.

ಪರಿಸರದ ಮೇಲೆ, ಜೀವದ ಮೇಲೆ ದಾಳಿ ನಡೆಯುತ್ತಿದೆ. ಇಂತಹ ಆಕ್ರಮಣ ಕಾಲದಲ್ಲೆ ನಮ್ಮನ್ನು ನಡೆಸುವ ಚಾಲಕತ್ವ ಯಾವುದು? ವಿಜ್ಞಾನವೇ, ಧರ್ಮವೇ, ದೈವವೇ? ಜೀವದ ಬೆಲೆ ಹಗುರಾಗುತ್ತಿದೆ. ಸಂತಾಪ ಸೂಚಿಸಲು ನಿಘಂಟಿನಲ್ಲಿ ಹೊಸಪದಗಳು ಸಿಕ್ಕುತ್ತಿಲ್ಲ. ಕೊರೊನಾದಿಂದ ಸಮಾಜಕ್ಕೆ ಬೇಕಾದವರು ಮಾಯವಾಗುತ್ತಿದ್ದಾರೆ. ಜವರಾಯನನ್ನು ಕುರಿತು ನಮ್ಮ ಜನಪದರು ‘ಒಳ್ಳೊಳ್ಳೆ ಮರನ ಕಡಿಬಂದ’ ಎಂದು ದೂಷಿಸಿದ್ದಾರೆ. ಅವನೇನು ಜನರ ಮಾತಿಗೆ ಹೆದರುವವನಲ್ಲ. ತನಗೆ ಬೇಕಾದವರನ್ನು ಬಿಡದೆ ಕೊಂಡೊಯ್ಯುವವನೇ. ತನ್ನ ಬಂಡಿಯಲ್ಲಿ ತಾನೇ ಒಡೆಯನಾದ ಈ ಯಮರಾಯ ಒಳ್ಳೊಳ್ಳೆ ಜೀವವನ್ನೇ ಆರಿಸಿಕೊಳ್ಳುತ್ತಿದ್ದಾನೆ.

ಕವಿ ಸಿದ್ಧಲಿಂಗಯ್ಯನವರನ್ನು ಕಳೆದುಕೊಂಡೆವು. ಆ ನೋವೇ ಇನ್ನೂ ಹಬೆಯಾಡುತ್ತಿರುವಾಗ ಸಂತನಂತಹ ಸಂಚಾರಿ ವಿಜಯ್ ಎಂಬ ಹೆಂಗರುಳಿನ ನಟನನ್ನು ಕಳೆದುಕೊಂಡೆವು. ಮುಂದಿನ ಸರದಿಯಲ್ಲಿ ಯಾರಿದ್ದಾರೋ ತಿಳಿಯದು.

ಸಿದ್ದಲಿಂಗಯ್ಯನವರು ಕವಿತೆಗಳ ಮೂಲಕ ನಿರ್ಲಕ್ಷ್ಯಕ್ಕೆ ಒಳಗಾದವರಿಗೆ ಹೋರಾಟದ ಕೆಚ್ಚನ್ನು ತುಂಬಿದವರು. ಆತ್ಮವಿಶ್ವಾಸ ತುಂಬಿದವರು. ಸ್ವತಂತ್ರ ಭಾರತದಲ್ಲಿ ಸ್ವಾತಂತ್ರ್ಯ ಪಡೆಯದವರ ನೋವನ್ನು ಕವಿತೆಯಲ್ಲಿ ತೋರಿಸಿದವರು. ಅವರನ್ನು ಕಳೆದುಕೊಂಡಿದ್ದು ನಮ್ಮ ದೌರ್ಭಾಗ್ಯವೇ ಸರಿ.

ನಟ ವಿಜಯ್ ಅದ್ಭುತ ಪ್ರತಿಭೆ. ಕಲೆಯ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧೆಗೆ ಇಳಿಯದೆ ತಮ್ಮ ಪ್ರತಿಭೆಯಿಂದಲೇ ಮುಂದೆ ಬಂದವರು. ತಾನು ಕಷ್ಟದಿಂದ ಬಂದವನು ಎಂಬುದನ್ನು ಮರೆಯದ ಅವರು ಇತರರ ಕಷ್ಟಕ್ಕೆ ಮರುಗಿದವರು. ತಾನು ಪಡೆದಿದ್ದನ್ನು ಇತರರಿಗೆ ಹಂಚುವುದರಲ್ಲಿ ಸುಖ ಕಂಡವರು. ಈ ನಟನ ಸಂಗಾತಿಗಳು, ಆತನ ಸಾಮಾಜಿಕ ಕಳಕಳಿ, ಇತರರಿಗೆ ತುಡಿಯುವ ವ್ಯಕ್ತಿವನ್ನು ಕುರಿತು ಮಾತನಾಡುತ್ತಿದ್ದಾರೆ. ಈ ಪ್ರಾಮಾಣಿಕವಾದ ನುಡಿಗಳು ಎಲೆಮರೆಯ ಕಾಯಂತೆ ಜೀವಿಸಿದ ಅವರ ಘನತೆಯನ್ನು ತೋರುತ್ತವೆ. ಅಪಘಾತವೊಂದರಲ್ಲಿ ಜೀವತೆತ್ತ ಈ ನಟ ಸತ್ತ ನಂತರವೂ ತನ್ನ ಅಂಗಾಂಗಳನ್ನು ತನ್ನ ಸಮಾಜಕ್ಕೆ ಕಾಣಿಕೆಯಾಗಿ ಕೊಟ್ಟವರು.

ರಾಷ್ಟ್ರಕವಿ, ರಾಷ್ಟ್ರೀಯ ಸ್ಮಾರಕಗಳು, ಪುತ್ಥಳಿಗಳನ್ನು ಕುರಿತು ಇಂತಹ ಸಂದರ್ಭಗಳಲ್ಲಿ ಚರ್ಚೆ ನಡೆಯುವುದು ಸಹಜ. ನಾಡುನುಡಿಗಳನ್ನು ಕಟ್ಟಿದ ಮಹಾನ್ ವ್ಯಕ್ತಿತ್ವಗಳು ಮಾತ್ರ ಇಂತಹ ಮನ್ನಣೆಯನ್ನು ಪಡೆಯಲು ಅರ್ಹರಾಗುತ್ತಾರೆ. ನಾಡುನುಡಿಗಳ ಬಗೆಗಿನ ಅವರ ಬದ್ಧತೆಯೇ ಅವರಿಗೆ ಈ ಮಾನ್ಯತೆಯನ್ನು ತಂದುಕೊಡುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಅಂದೋ ಇಂದೋ ಎಂತೋ ನಾವು ಈ ಜೀವದ ಕಥೆಯನ್ನು ಮುಗಿಸುವವರೇ ಆಗಿದ್ದೇವೆ. ಈ ಜೀವವನ್ನು ಮುಂದೆ ಕಳೆದುಕೊಳ್ಳುವವರೇ ಆಗಿದ್ದೇವೆ. ತರತಮಗಳಿಲ್ಲದೆ ಪಡೆವ ಸಾವನ್ನು ಕುರಿತು ಡಿವಿಜಿ ಹೇಳುವಂತೆ ‘ಒಂದೆ ಮರೆವಿನ ಮುಸುಕು ಮುಸಿಕಲಿಹುದೆಲ್ಲವನು, ಸಂತಸದ ಮಾತಿಷ್ಟೆ’ ಎಂಬುದನ್ನು ಒಪ್ಪಿಕೊಳ್ಳಲೇಬೇಕು.

■ **ಅಮೃತಮತಿ**

## ಮಾತೇ ಮುತ್ತು

- ಹಾಸ್ಯಾಸ್ಪದವಾಗದಂಥ, ಗಂಭೀರವೂ ಸ್ಪಷ್ಟವೂ ಆಗಿರುವಂಥ ಶೈಲಿಯನ್ನು ಪಡೆದ ಭಾಷೆ ಪ್ರಬುದ್ಧವಾದದ್ದು.

  —ಲಂಕೇಶ್

- ಧರ್ಮಗುರುವಿನ ಪೀಠ ಮುಗ್ಗರಿಸಿ ಮುರಿದಿತ್ತು ದೈವಗುಡಿ ಜನರಮನೆ ಆಗುತ್ತಿತ್ತು ಕನಸೊಂದು ನನಸಾಗಿ ಕ್ರಾಂತಿಬೆಳೆ ಹುಲುಸಾಗಿ ಬೆಳೆವುದೆನ್ನುವ ಆಶೆ ಮೂಡುತ್ತಿತ್ತು.

  —ಡಾ. ಸಿದ್ದಲಿಂಗಯ್ಯ

- ಮೂರ್ತವನ್ನು ಒಟ್ಟುಗೂಡಿಸಿ ಅಮೂರ್ತದ ವಿರುದ್ಧ ಹೋರಾಡುವುದು ಮೊದಲ ಹೆಜ್ಜೆ.

  —ದೇವನೂರು ಮಹದೇವ

- ತನ್ನನ್ನು ತಾನು ಗುರುತಿಸಿಕೊಂಡು, ತನ್ನ ವಿಶೇಷವನ್ನು ಶಕ್ತಿಯ ಪರಿಮಿತಿಯನ್ನು ಅರಿತು, ತನ್ನ ತನದ ವೈಶಿಷ್ಟ್ಯವನ್ನು ಬೆಳೆಸಿಕೊಳ್ಳುತ್ತಾ ಉಳಿದವರ ಜೊತೆಗೆ ಸಮಭಾವದಿಂದ ಸಹಕರಿಸಲು ಕಲಿಸುವುದೇ ನಿಜವಾದ ಸಂಸ್ಕೃತಿಯ ಲಕ್ಷಣ.

  —ಎಂ. ಗೋಪಾಲಕೃಷ್ಣ ಅಡಿಗ